size_20x6

ಸಾರ್ವಜನಿಕ ಶಿಕ್ಷಣ ಇಲಾಖೆ

# ತಿಂಗಳ ತಿರುಳು

## ಜನವರಿ–2016



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಯವರು

**ಶ್ರೀ ಕಿಮ್ಮನೆ ರತ್ನಾಕರ್**
ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು







## ಎಲ್ಲ ಓದುಗರಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು

**12.01.2016 : ಸ್ವಾಮಿ ವಿವೇಕಾನಂದರ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ:** ಸ್ವಾಮಿ ವಿವೇಕಾನಂದರ 153 ನೇ ಜಯಂತಿಯ ಸಂದರ್ಭದಲ್ಲಿ ಅವರ ಜೀವನ, ಸಾಧನೆ, ಆದರ್ಶ ಮತ್ತು ಶೈಕ್ಷಣಿಕ ವಿಚಾರಗಳ ಕುರಿತು ಶಾಲೆಗಳಲ್ಲಿ ಉಪನ್ಯಾಸ ಏರ್ಪಡಿಸುವುದು. ಮಕ್ಕಳಿಂದ ಪ್ರಬಂಧ ಬರೆಸುವುದು. ವಿವೇಕಾನಂದರ ವಿಚಾರಧಾರೆಯನ್ನು ಓದಲು ಪ್ರೇರೇಪಿಸುವುದು.

**13.01.2016 : ಅಣಕು ಸಂಸತ್:** ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಸಂಸತ್‌ಗೆ ಸದಸ್ಯರ ಆಯ್ಕೆ, ಸಚಿವರ ಖಾತೆಗಳ ಆಯ್ಕೆ, ಆಸನ ವ್ಯವಸ್ಥೆ, ಚರ್ಚಾ ವಿಷಯ, ಕಲಾಪ, ಮಂಡನೆ, ಸಭಾಧ್ಯಕ್ಷರ ಆಯ್ಕೆ, ಸಂಸತ್ ಕಲಾಪ, ವಿಷಯ ನೀಡುವುದು, ಉತ್ತಮ ಸಂಸತ್ ಪಟುವಿನ ಆಯ್ಕೆ ಮುಂತಾದ ಪ್ರಕ್ರಿಯೆಗಳನ್ನು ನಡೆಸುವುದು.

**23.01.2016 : ನೇತಾಜಿ ಸುಭಾಷ್ ಚಂದ್ರ ಬೋಸ್ ಜಯಂತಿ :** ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪಾತ್ರದ ಕಿರು ಪರಿಚಯವನ್ನು ಮಾಡಿಕೊಡುವುದು.

**26.01.2016 : ಗಣರಾಜ್ಯೋತ್ಸವ ದಿನಾಚರಣೆ :** ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ಪೋಷಕರು ಹಾಗೂ ಸಮುದಾಯದ ಗಣ್ಯರ ಹಾಜರಿಯಲ್ಲಿ 67ನೇ ಗಣರಾಜ್ಯೋತ್ಸವ ಆಚರಿಸುವುದು. ಸಂವಿಧಾನದ ಬಗ್ಗೆ ಅರಿವು ಮೂಡಿಸುವುದು.

**30.01.2016 : ಹುತಾತ್ಮರ ದಿನಾಚರಣೆ:** ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಹತ್ಯೆಯಾದ ದಿನ. ಸತ್ಯ, ಶಾಂತಿ, ಅಹಿಂಸೆ ಮುಂತಾದ ಮೌಲ್ಯಗಳನ್ನು ಮಕ್ಕಳಿಗೆ ಮನನ ಮಾಡಿಕೊಡುವುದು. ದೇಶದ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ಸೈನಿಕರು ಮತ್ತು ನಾಯಕರಿಗೆ ಗೌರವ ಸಲ್ಲಿಸುವುದು. ಶ್ರಮದಾನದ ಮೂಲಕ ಸುತ್ತಮುತ್ತಲ ಪರಿಸರದ ಸ್ವಚ್ಛತೆಯಲ್ಲಿ ತೊಡಗಿಸಿಕೊಳ್ಳುವುದು. ಸರ್ವಧರ್ಮ ಪ್ರಾರ್ಥನೆ ಹಮ್ಮಿಕೊಳ್ಳುವುದು.

**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ :**

**ಶಾಲಾ ಹಂತ:** ಶಾಲಾ ಅಭಿವೃದ್ಧಿ ಯೋಜನೆಯ ತಯಾರಿಕೆ.

**ಬ್ಲಾಕ್ ಹಂತ:** 2016–17ನೇ ಸಾಲಿನ ಹೊಸ ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಶಾಲಾ ನಕ್ಷೆಯ ತಯಾರಿಕೆ

**ಜಿಲ್ಲಾ ಹಂತ :** 2016–17ನೇ ಸಾಲಿನ ಗುಣಮಟ್ಟದ ಶಾಲಾ ಶಿಕ್ಷಣಕ್ಕೆ ಜಿಲ್ಲಾಮಟ್ಟದ ಯೋಜನೆಯ ತಯಾರಿಕೆ.

**ದೈಹಿಕ ಶಿಕ್ಷಣ :** 61ನೇ ರಾಷ್ಟ್ರಮಟ್ಟದ ಕ್ರೀಡಾಕೂಟವನ್ನು ದಿನಾಂಕ: 02–01–2016 ರಿಂದ ದೆಹಲಿಯಲ್ಲಿ ಆಯೋಜಿಸಲಾಗಿದ್ದು, ರಾಜ್ಯದ ತಂಡಗಳು ಈ ಕೆಳಕಂಡ ಕ್ರೀಡೆಗಳಲ್ಲಿ ಭಾಗವಹಿಸುತ್ತಿವೆ. • **ಜೂಡೊ** : 14 ಮತ್ತು 17 ವರ್ಷ ವಯೋಮಿತಿಯ ಬಾಲಕ ಮತ್ತು ಬಾಲಕಿಯರ ತಂಡಗಳು • **ಟೇಬಲ್ ಟೆನ್ನಿಸ್** : 17 ವರ್ಷ ವಯೋಮಿತಿಯ ಬಾಲಕ ಮತ್ತು ಬಾಲಕಿಯರ ತಂಡಗಳು • **ಯೋಗ** : 14 ಮತ್ತು 17 ವರ್ಷದ ವಯೋಮಿತಿಯ ಬಾಲಕ ಮತ್ತು ಬಾಲಕಿಯರ ತಂಡಗಳು. • **ಹ್ಯಾಂಡ್‌ಬಾಲ್** : 14 ವರ್ಷದ ವಯೋಮಿತಿಯ ಬಾಲಕ ಮತ್ತು ಬಾಲಕಿಯರ ತಂಡಗಳು. • **ಕುಸ್ತಿ** : 14 ವರ್ಷದ ವಯೋಮಿತಿಯ ಬಾಲಕರ ತಂಡ

**ಶಾಲೆಯಿಂದ ಹೊರಗುಳಿದ ಮಕ್ಕಳು:** 2016–17ನೇ ಸಾಲಿಗೆ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸುವ ಪರಿಷ್ಕರಣ ಸಮೀಕ್ಷೆಯನ್ನು ದಿನಾಂಕ: 28.12.2015 ರಿಂದ 08.01.2016 ವರೆಗೆ ನಡೆಸಲಾಗುತ್ತಿದೆ. ಯಾವ ಮಗುವೂ ಶಾಲೆಯಿಂದ ಹೊರಗುಳಿಯದಂತೆ ಸಮೀಕ್ಷೆ ಕಾರ್ಯ ನಡೆಸಲು, ಇಲಾಖೆಯೊಂದಿಗೆ ಸಮುದಾಯ, ಸಂಘ ಸಂಸ್ಥೆಗಳು, ಪೋಷಕರು ಮತ್ತು ಸಾರ್ವಜನಿಕರು ಸಹಕರಿಸಲು ಕೋರಿದೆ.

**"ಉತ್ತಮ ಶಿಸ್ತು, ಸೇವೆ ಹಾಗೂ ಪರಿಸರ ರಕ್ಷಣೆಗೆ ಸ್ಕೌಟ್ಸ್ ಅಂಡ್ ಗೈಡ್ಸ್ ಸೇರಿರಿ"**

**ಪೋಷಕರೇ ಮತ್ತು ಶಿಕ್ಷಕರೇ,**
**"ಮಕ್ಕಳು ಆಸಕ್ತಿಯಿರುವ ಪುಸ್ತಕ ಓದಲು ಪ್ರೋತ್ಸಾಹಿಸಿ, ಓದಿ ಆನಂದಿಸುವುದನ್ನು ರೂಢಿಸಿ"**

ಹೆಚ್ಚಿನ ವಿವರಗಳಿಗೆ ಇಲಾಖೆ ವೆಬ್‌ಸೈಟ್ ನೋಡಿ:
www.schooleducation.kar.nic.in
www.ssakarnataka.gov.in
ಶಿಕ್ಷಣ ಹಕ್ಕು ಕಾಯ್ದೆ ಕುರಿತು ತಿಳಿಯಲು
ಟೋಲ್ ಫ್ರೀ ನಂ: **1800 4253 4567**
ಮಕ್ಕಳ ಸಹಾಯವಾಣಿ : **1098**

ಮಕ್ಕಳ ಶಿಕ್ಷಣ ಹಕ್ಕು
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ–ಎಲ್ಲರೂ ಬೆಳೆಯೋಣ